ದಿನಾಂಕಃ 02.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು

ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ. ವಕೀಲರಿಂದಃ

1. ನಿಮ್ಮ ಮದುವೆ ಆಗಿ ಎಷ್ಟು ವರ್ಷ ಆಗಿದೆ ಎಂದರೆ ಸಾಕ್ಷಿ 24 ವರ್ಷ ಆಗಿದೆ ಎಂದು ಹೇಳುತ್ತಾರೆ. ನಿಮ್ಮ ಯಜಮಾನರು ಮರಣ ಹೊಂದಿ ಎಷ್ಟು ವರ್ಷ ಆಗಿದೆ ಎಂದರೆ ಸಾಕ್ಷಿ ಅಂದಾಜು 13 ವರ್ಷ ಆಗಿದೆ ಎಂದು ಹೇಳುತ್ತಾರೆ. ನಿಮಗೆ ಎಷ್ಟು ಜನ ಮಕ್ಕಳಿದ್ದಾರೆ ಎಂದರೆ ಸಾಕ್ಷಿ 4 ಜನ ಎಂದು ಹೇಳುತ್ತಾರೆ. ನಿಮ್ಮ ಮಕ್ಕಳು ಏನು ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ಓದುತ್ತಿದ್ದಾರೆ ಎಂದು ಹೇಳುತ್ತಾರೆ. ಮೃತನು ನಿಮ್ಮ ದೊಡ್ಡ ಮಗನಾ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ.

2. ನಿಮ್ಮ ಮಗ ಚಲಾಯಿಸುತ್ತಿದ್ದಂತಹ ಮೋಟರ್ ಸೈಕಲ್ ಕೆ.ಎ. 50 ಇ.ಹೆಚ್ 4831 ಇದು ಯಾರಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿಯು ನಾಜಿರ್ ಎಂಬುವವರಿಗೆ ಸಂಬಂಧಿಸಿದ್ದು ಎಂದು ಹೇಳುತ್ತಾರೆ. ನಿಮ್ಮ ಮಗನಿಗೆ ಮೋಟರ್ ಸೈಕಲ್ ಚಲಾಯಿಸಲು ಡಿ.ಎಲ್ ಇರಲಿಲ್ಲ ಎಂದರೆ ಸಾಕ್ಷಿ ಇದೆ ಎಂದು ಹೇಳುತ್ತಾರೆ. ನಿಮ್ಮ ಮಗನ ಡಿ.ಎಲ್ ಅನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿಯ ಅಪಘಾತದ ವೇಳೆಯಲ್ಲಿ ಅದು ಕಳೆದುಹೋಗಿದೆ ಎಂದು ಹೇಳುತ್ತಾರೆ. ಕಲ್ಯಾಣ ನಗರದಲ್ಲಿ ನೀವು ಎಷ್ಟು ವರ್ಷದಿಂದ ವಾಸವಾಗಿದ್ದೀರಾ ಎಂದರೆ ಸಾಕ್ಷಿಯು ಮದುವೆ ಆದಾಗಿನಿಂದ ಅಲ್ಲಿಯೇ ವಾಸವಾಗಿದ್ದೇನೆಎಂದು ಹೇಳುತ್ತಾರೆ. ಡಿ.ಎಲ್ ಮಾಡಿಸಿದ್ದರೆ ಕಲ್ಯಾಣ ನಗರದ ಆರ್.ಟಿ.ಓ ನಲ್ಲಿ ಮಾಡಿಸಿರುತ್ತೀರ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಆರ್.ಟಿ.ಓ ದಿಂದ ನಿಮ್ಮ ಮಗನ ಡಿ.ಎಲ್ ಅನ್ನು ತೆಗೆದುಕೊಂಡು ಹಾಜರುಪಡಿಸಲು ಸಮಸ್ಯೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

3. ಪೋಲೀಸರು ನಿಮ್ಮ ಮಗನಿಗೆ ಮೋಟರ್ ಸೈಕಲ್ ಚಲಾಯಿಸಲು ಡಿ.ಎಲ್ ಇಲ್ಲ ಎಂದು ಹೇಳಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ನೀವು ಅಪಘಾತವಾದ ಸ್ಥಳವನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅಪಘಾತವಾದ ರಸ್ತೆ ಏಮುಖವಾದ ರಸ್ತೆ ಎಂದರೆ ಸರಿ. ಈ ರಸ್ತೆಯು ಹೆಬ್ಬಾಳದಿಂದ ಕೆ.ಆರ್. ಪುರಂ ಹೋಗುವ ರಸ್ತೆ ಎಂದರೆ ಸರಿ. ಅಪಘಾತವಾದ ರಸ್ತೆ ಕೇವಲ ಏಕಮುಖ ರಸ್ತೆಯಾದ್ದರಿಂದ ಹೆಬ್ಬಾಳ ದಿಂದ ಕೆ.ಆರ್. ಪುರಂ ಗೆ ಮಾತ್ರ ಹೋಗಬಹುದು ಎಂದರೆ ಸಾಕ್ಷಿಯು ಇದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಪಘಾತವಾದ ರಸ್ತೆ ಕೇವಲ ಏಕಮುಖ ರಸ್ತೆಯಾದ್ದರಿಂದ ನಿಮ್ಮ ಮಗ ವಿರುದ್ಧ ದಿಕ್ಕಿಗೆ ಬಂದಿದ್ದರಿಂದ ಅಪಘಾತ ನಿಮ್ಮ ಮಗನ ತಪ್ಪಿ ನಿಂದಲೇ ಆಗಿದೆ ಎಂದರೆ ಸರಿಯಲ್ಲ. ಈ ಅಪಘಾತವು ಕೆ.ಎ.03 ಕೆ.ಆರ್.2843 ರ ಚಾಲಕನ ಯಾವುದೇ ರೀತಿಯ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮಗನ ತಪ್ಪಿ ನಿಂದಲೇ ಈ ಅಪಘಾತವಾಗಿದ್ದರಿಂದ ನೀವು ಯಾವುದೇ ರೀತಿಯ ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿಯಲ್ಲ.

4. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರ 3 ಮತ್ತು 4 ನೇ ಖಂಡಿಕೆಗಳಲ್ಲಿ ನಮೂದಿಸಿದ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲಲ. ನಿಮ್ಮ ಮಗನ ಶವ ಸಂಸ್ಕಾರಕ್ಕಾಗಿ ರೂ.2 ಲಕ್ಷ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರ ಎಂದರೆ ಸರಿಯಲ್ಲ. ನಿಮ್ಮ ಮಗ ಆಟೋ ಚಲಾಯಿಸುತ್ತಿದ್ದ ಎಂಬುದರ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಿಮ್ಮ ಮಗನಿಗೆ ತಿಂಗಳಿಗೆ ರೂ.20,000/- ಇತ್ತು ಎಂದು ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಮಗನ ಆಧಾರ್ ಕಾರ್ಡ ಮತ್ತು ಓಟರ್ ಕಾರ್ಡ ಇದೆಯಾ ಎಂದರೆ ಸಾಕ್ಷಿ ಇಲ್ಲ ಕಳೆದುಹೋಗಿದೆ ಎಂದು ಹೇಳುತಾರೆ. ನಿಮ್ಮ ಮಗನಿಗೆ ಅಪಘಾತವಾದಾಗ 17 ವರ್ಷ ವಿತ್ತು ಅದನ್ನು ಮರೆಮಾಚಲು ಓಟರ್ ಐ.ಡಿ. ಮತ್ತು

ಆಧಾರ್ ಕಾರ್ಡನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಮ್ಮ ಬಳಿ ರೇಷನ್ ಕಾರ್ಡ್ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಮ್ಮ ಕುಟುಬಂದಲ್ಲಿ ಎಷ್ಟು ಜನ ಇದ್ದೀರಾ ಎಂಬುದನ್ನು ತೋರಿಸಲು ಏನಾದರೂ ದಾಖಲಾತಿ ಇದೆಯಾ ಎಂದರೆ ಸಾಕ್ಷಿಯು ಆಧಾರ್ ಕಾರ್ಡ್ ಇದೆ ಎಂದು ಹೇಳುತ್ತಾರೆ.

5. ನಿಮ್ಮ ಪ್ರಮಾಣ ಪತ್ರದ 5 ನೇ ಖಂಡಿಕೆಯಲ್ಲಿ ನಮೂದಿಸಿದ ಸಂಗತಿಗಳು ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ನಿಮ ಮಗನ ತಪ್ಪಿ ನಿಂದ ಅಪಘಾತವಾಗಿದ್ದರೂ ಸಹ ಪೋಲೀಸರ ಜೊತೆ ಶಾಮೀಲಾಗಿ ನಮ್ಮ ವಾಹನದ ಮೇಲೆ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನಿಮ್ಮ ಮಗನು ಅತಿವೇಗ ಮತ್ತು ನಿಶಲಕ್ಷತನದಿಂದ ಬೈಕನ್ನು ಚಲಾಯಿಸಿದ್ದರಿಂದ ಆತನ ತಪ್ಪಿ ನಿಂದಲೇ ಈ ಅಪಘಾತವಾಗಿದೆ ಎಂದರೆ ಸರಿಯಲ್ಲ. ನೀವು ಪರಿಹಾರ ಪಡೆಯುವಗೋಸ್ಕರ ದಾಖಲಾತಿಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

**2 ನೇ ಎದುರುದಾರರ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ

17 ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ ಸದಸ್ಯರು